1-30 P.M.

ಶ್ರೀ ಗಂಗಾಬೋವಿ.—ಪ್ರತಿಯೊಂದು ಜಿಲ್ಲೆಯಲ್ಲೂ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿರುವಾಗ ತುಮಕೂರು ಜಿಲ್ಲೆಯಲ್ಲಿ ಮಾತ್ರ 1963 ರಿಂದ ಪ್ರಾರಂಭಿಸಬೇಕೆಂದು ಸರಕಾರ ಉದ್ದೇಶಪಟ್ಟಿದ್ದರೂ ಕೂಡ ಇದುವರೆಗೂ ಏಕೆ ಸ್ಥಾಪಿಸಿಲ್ಲ ?

†ಶ್ರೀ ಕೆ. ವಿ. ಶಂಕರಗೌಡ.—ಪ್ರತಿಯೊಂದು ಜಿಲ್ಲೆಯಲ್ಲೂ ಅವನ್ನು ಸ್ಥಾಪಿಸಿವೆಯೆಂದು ಹೇಳುವುದು ಸರಿಯಲ್ಲ. ಪ್ರತಿಯೊಂದು ಜಿಲ್ಲೆಯಲ್ಲೂ ಅವು ಇಲ್ಲ. ಕೇವಲ 6 ಜಿಲ್ಲೆಗಳಲ್ಲಿವೆ. ಬಾಕಿ ಜಿಲ್ಲೆಗಳಲ್ಲಿ ಫೇಜ್ಡ್ ಪ್ರೋಗ್ರಾಂ ಪ್ರಕಾರ ಪ್ರಾರಂಭಿಸಬೇಕಾಗಿದೆ. ನಾಲ್ಕನೆಯ ಯೋಜನೆಯಲ್ಲಿ ತುಮಕೂರು ಜಿಲ್ಲೆಯಲ್ಲಿ ಐ.ಟಿ.ಐ. ಪ್ರಾರಂಭಿಸಲು ಪ್ರಯತ್ನಮಾಡುತ್ತೇವೆ.

ಶ್ರೀ ಗಂಗಾಬೋವಿ.—ಎಷ್ಟು ದಿವಸಗಳಲ್ಲಿ ಪ್ರಾರಂಭಿಸುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಅದನ್ನು ಹೇಳುವುದಕ್ಕಾಗುವುದಿಲ್ಲ. ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಮಾಡಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮಧುಗಿರಿಯಲ್ಲಿ 7-8 ಕ್ಲಾಫ್ಟ್‌ಗಳಿದ್ದರೂ ಕೂಡ ಅಲ್ಲಿ ಸಾಕಷ್ಟು ವಿದ್ಯಾರ್ಥಿಗಳೇ ಇಲ್ಲ, ಅವರಿಂದ ನಷ್ಟವಾಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಮಧುಗಿರಿಯಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರೇ ಇಲ್ಲ.

## Abolition of Hereditary Posts

23. Sri E. PUNDALEEKAPPA (Kushtagi).—

Will the Minister for Revenue be pleased to state:—

(*a*) when the hereditary posts in the State were abolished ;

(*b*) if ablished, the reasons for not yet bringing the relevant Act into force ;

(*c*) whether it has come to their notice that the ryots and the Government are experiencing trouble as the Village Officers have taken up various professions in anticipation of their removal from the service ;

(*d*) whether any date has been decided for the abolition of the said posts, if not, whether they are contemplating to decide the same early ;

(*e*) whether it is a fact that the district Revenue Officers have recommended to the Government to continue the Village O ficers for the time being ?

*A.*—Sri H. V. KOUJALGI (Minister for Revenue).—

(*a*) Hereditary Village Offices were abolished with effect from 1st February 1963.

(*b*) Does not arise in view of reply to clause (*a*) above.

(*c*) No.

(*d*) Does not arise in view of reply to clause (*a*) above.

(*e*) No.

ಶ್ರೀ ಇ. ಪುಂಡಲೀಕಪ್ಪ.—1963ರಲ್ಲಿ ಗ್ರಾಮಾಧಿಕಾರಿಗಳ ಹುದ್ದೆಯನ್ನು ರದ್ದುಮಾಡಲು ಕಾನೂನನ್ನು ಮಾಡಿದರೂ ಕೂಡ ಅದನ್ನೇಕೆ ಇನ್ನೂ ಜಾರಿಗೆ ಕೊಟ್ಟಿಲ್ಲ ?

†ಶ್ರೀ ಎಚ್. ವಿ. ಕೌಜಲಗಿ.—ಮಾಡಿದ್ದ ಕಾನೂನನ್ನು ಹೈಕೋರ್ಟಿನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಥಾರೆಂಜ್ ಮಾಡಿದ್ದರಿಂದ ನಿಧಾನವಾಗಿದೆ.

ಶ್ರೀ ಇ. ಪುಂಡಲೀಕಪ್ಪ.—ಸುಪ್ರೀಂ ಕೋರ್ಟಿನ ನಿರ್ಣಯ ಯಾವ ತಾರೀಖಿನಲ್ಲಿ ಆಗಿದೆ.

ಶ್ರೀ ಎಚ್. ವಿ. ಕೌಜಲಗಿ.—ಅದು ನನ್ನ ಕಡೆ ಇಲ್ಲ.

ಶ್ರೀ ಎಂ. ನಾಗಪ್ಪ.—ಸುಪ್ರೀಂ ಕೋರ್ಟ್ ತೀರ್ಮಾನವಾಗಿ 3 ವರ್ಷವಾದರೂ ಇಲ್ಲಿಯವರೆಗೆ ಇಂಪ್ಲಿಮೆಂಟ್ ಮಾಡಿಲ್ಲ. ಜನರನ್ನು ಇಂಟರ್‌ವ್ಯೂಗೆ ಕರೆಯುವುದು ವಾಪಸು ಕಳಿಸುವುದು ಇಷ್ಟು ಮಾತ್ರ ನಡೆಯುತ್ತಿದೆ. ಈ ನೌಕರರನ್ನು ಹೊಸ ಕಾನೂನು ಪ್ರಕಾರ ಜಾಗ್ರತೆ ನೇಮಕ ಮಾಡಬೇಕೆಂಬ ಉದ್ದೇಶವಿದೆಯೋ, ಅಥವಾ ಕಾನೂನನ್ನು ಜರಾಯಿಸಬಾರದೆಂಬ ಉದ್ದೇಶ ವಿದೆಯೋ ?

ಶ್ರೀ ಎಚ್. ವಿ. ಕೌಜಲಗಿ.—ಜರಾಯಿಸಬೇಕೆಂಬುದೇ ಸರಕಾರದ ಉದ್ದೇಶ. ಕಾಯಿದೆ ಪಾಸ್ ಆಗಿದೆ. ಈಗ ಅನೇಕ ಕಡೆ ವಿಲೇಜ್ ಅಕೌಂಟೆಂಟನ್ನು ನೇಮಕಮಾಡಿದೆ. ಕೆಲವು ಕಡೆ ಇನ್ನೂ ನೇಮಕಮಾಡಬೇಕಾಗಿದೆ.

ಶ್ರೀ ಎಂ. ನಾಗಪ್ಪ.—ಹೈದರಾಬಾದು ಕರ್ನಾಟಕದಲ್ಲಿ 3-4 ಕಡೆ ಬಿಟ್ಟರೆ ಬೇರೆ ಕಡೆ ಇನ್ನೂ ನೇಮಕ ಮಾಡದಿರಲು ಕಾರಣವೇನು ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿ ತೀವ್ರವಾಗಿ ನೇಮಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

Sri D. B. KALMANKAR.—Has it come to the notice of the Government that in Gulbarga District, though notifications have already been issued in this respect, so far no appointments are made ? May I know what are the reasons for not making appointments ?

Sri H. V. KOUJALGI.—The question of appointment has been engaging the attention of the Government and these appointments will be made shortly.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ದಾವಣಗೆರೆ ತಾಲ್ಲೂಕು ಕಾಡಜ್ಜಿ ರೈತರಿಂದ ಪಟೇಲ ಶ್ಯಾನುಭೋಗರು 19 ಕ್ವಿಂಟಾರ್ ರಾಗಿ ತೆಗೆದುಕೊಂಡು ಅವ್ಯವಹಾರ ಮಾಡಿರುವ ಬಗ್ಗೆ ದೂರು ಬಂದಿದೆಯೆ ?

ಶ್ರೀ ಎಚ್. ವಿ. ಕೌಜಲಗಿ.—ಅವರು ಹಾಗೆ ಮಾಡಿರುವಂತೆ ಕಂಡುಬರುವುದಿಲ್ಲ.

ಶ್ರೀ ಎಂ. ಎನ್. ರಾಮಣ್ಣ.—ಅನುವಂಶಿಕ ಹುದ್ದೆಗಳನ್ನು ರದ್ದು ಮಾಡುತ್ತಿದ್ದೀರಿ. ಅವರಿಗೆ ಕೊಡತಕ್ಕ ಪರಿಹಾರವನ್ನು ಎಷ್ಟು ದಿವಸಗಳಲ್ಲಿ ಕೊಡಿಸುತ್ತೀರಿ ?

ಶ್ರೀ ಎಚ್. ವಿ. ಕೌಜಲಗಿ.—ಮೊದಲಿನ ಕಾಯಿದೆ ಪ್ರಕಾರ ಅವರಿಗೆ ಏನು ಪರಿಹಾರ ಸಿಕ್ಕುತ್ತಿತ್ತು ಅದನ್ನು ಅವರಿಗೆ ಕೊಡುತ್ತಿದ್ದೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅನುವಂಶಿಕ ಹುದ್ದೆಗಳನ್ನು ರದ್ದು ಮಾಡುವ ವಿಷಯವನ್ನು 1963ರಿಂದ ಇಲ್ಲಿಯವರೆಗೂ ತಳ್ಳುತ್ತಿದ್ದೀರಿ. ಏಪ್ರಿಲ್ ತಿಂಗಳವರೆಗೂ ಅವರನ್ನು ಇಟ್ಟುಕೊಂಡು ಅಮೇಲೆ ತೆಗೆಯುತ್ತೀರೆಂದು ತಿಳಿದುಬರುತ್ತದೆ. ಮುಂದಿನ ಏಪ್ರಿಲ್ ತಿಗಳಿನಿಂದಲಾದರೂ ನಂಸ್ಥಾನಾಮಳೆ ಅನುವಂಶಿಕ ಹುದ್ದೆಗಳನ್ನು ತೆಗೆದು ಹೊಸದಾಗಿ ಆಕೌಂಟೆಂಟರನ್ನು ನೇಮಕ ಮಾಡುವ ಭರವಸೆಯನ್ನು ಕೊಡಿಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈ ವರ್ಷದ ಅಖೈರೊಳಗಾಗಿ ಅವರನ್ನೆಲ್ಲ ತೆಗೆಯಬೇಕೆಂದು. ಸರ್ಕಾರದಲ್ಲಿ ಗೊತ್ತು ಮಾಡಿಕೊಂಡಿದ್ದೇವೆ.

ಶ್ರೀ ಎರ್. ಶ್ರೀಕಂಠಯ್ಯ.—ಅನುವಂಶಿಕ ಹುದ್ದೆ ರದ್ದಾದಮೇಲೆ, ನಮಗೆ ತಿಳಿದುಬಂದಿರುವ ಪ್ರಕಾರ ವರ್ಷಕ್ಕೊಮ್ಮೆ ತಾತ್ಕಾಲಿಕವಾಗಿ ವಿಲೇಜ ಅಕೌಂಟೆಂಟರನ್ನು ನೇಮಕ ಮಾಡಿಕೊಳ್ಳುತ್ತಿದ್ದೀರಿ. ಇದಕ್ಕೆ ಯಾವಾಗ ಸೂಕ್ತ ಪರಿಹಾರವನ್ನು ಕಂಡುಹಿಡಿಯುತ್ತೀರಿ, ಇದರ ಬಗ್ಗೆ ಸರ್ಕಾರದ ನೀತಿ ಮತ್ತು ಧೋರಣೆ ಏನು ಎನ್ನುವುದನ್ನು ಸ್ಪಷ್ಟಪಡಿಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಕಂದಾಯದ ವಸೂಲಿ ಬಗ್ಗೆ ವಿಲೇಜ ಅಕೌಂಟೆಂಟರನ್ನು ನೇಮಿಸ ಬೇಕೆಂದು ಗೊತ್ತುಮಾಡಿದೆ. ಅವರ ಸಹಾಯಕ್ಕಾಗಿ ರೆವೆನ್ಯೂ ಪಟೇಲರನ್ನೂ ನೇಮಿಸಬೇಕೆಂದು ಮಾಡಿದೆ.

ಶ್ರೀ ಎಚ್. ಸಿದ್ದವೀರಪ್ಪ.—1963ನೆ ಇಸವಿಯಲ್ಲಿ ಕಾನೂನಾದರಾಗಾಯ್ತು ಇಲ್ಲಿಯವರೆಗೂ ಅನುವಂಶಿಕ ಅಧಿಕಾರಿಗಳಿದ್ದರು. ಅವರು ನಾವು ಹುದ್ದೆಯನ್ನು ಬಿಟ್ಟುಕೊಡುವುದಕ್ಕೆ ತಯಾರಾ ಗಿದ್ದೇವೆ, ತೆಗೆದುಕೊಳ್ಳಿರಿ ಎಂದು ಹೇಳಿದರೂ ತೆಗೆದುಕೊಳ್ಳದೆ ಇರತಕ್ಕ ಪ್ರಸಂಗಗಳು ನಮ್ಮಲ್ಲ ವೆಯೇ, ಅಲ್ಲದೆ ಅವರಿಗೆ ಏನೇನು ಪರಿಹಾರ ಕೊಡಬೇಕು ಎಂದು ಮಾಡಿದ್ದೀರಿ ಅದನ್ನು ಇಲ್ಲಿಯ ವರೆಗೂ ಕೊಡದೆ ಇರುವುದಕ್ಕೆ ಕಾರಣವೇನು, ಅದಕ್ಕೆ ಅವರೇನಾದರೂ ಚಳುವಳಿ ಪ್ರಾರಂಭ ಮಾಡ ಬೇಕೇ? ಹಿಂದೆ ಇವ್ಹ ರೆವೆನ್ಯೂ ಮಂತ್ರಿಗಳಿಗೆ ಎಷ್ಟೋ ಸಾರಿ ಹೇಳಿದ್ದೂ ಇನ್ನೂ ಕೊಟ್ಟಿಲ್ಲ. ಪರಿಹಾರ ದ್ರವ್ಯ ಕೊಡುವ ವಿಚಾರವನ್ನು ಯಾವಾಗ ತೀರ್ಮಾನ ಮಾಡುತ್ತೀರಿ?

ಶ್ರೀ ಎಚ್. ವಿ. ಕೌಜಲಗಿ—ಕಾಯಿದೆ ಪ್ರಕಾರ ಅವರಿಗೆ ಏನೇನು ಕೊಡಬೇಕಾಗಿದೆಯೋ, ಅದನ್ನು ಕೊಡುತ್ತಾ ಬಂದಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಹೈಕೋರ್ಟಿನಲ್ಲಿ ವಿಲೇಜ್ ಅಕೌಂಟೆಂಟರು ಕೆಲವು ರಿಟ್ ಅರ್ಜಿಗಳನ್ನು ಹಾಕಿದ್ದಾರೆ. ಅವುಗಳನ್ನು ಬೇಗ ತೀರ್ಮಾನ ಮಾಡುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ?

ಶ್ರೀ ಎಚ್. ವಿ. ಕೌಜಲಗಿ.—ಆ ವಿಷಯದಲ್ಲಿ ಈಗ ಸದ್ಯಕ್ಕೆ ಮಾಹಿತಿ ಇಲ್ಲ ಸ್ವಾಮಿ.

ಶ್ರೀ ಎಂ. ಎನ್. ರಾಮಣ್ಣ.—ಕಾನೂನು ಪ್ರಕಾರ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದರು. ಇಲ್ಲಿಯವರೆಗೂ ಯಾರಿಗೂ ಕೊಟ್ಟಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ವಿ. ಕೌಜಲಗಿ.—ನನ್ನ ಮಾಹಿತಿ ಪ್ರಕಾರ ಕೆಲವು ಕಡೆ ಕೊಟ್ಟಿದೆ. ಕೆಲವು ಕಡೆ ಕೊಟ್ಟಿಲ್ಲ ಎಂದು ತಿಳಿಸಿದ್ದಾರೆ. ಅವರಿಗೆ ಕೊಡಲಿಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎಸ್. ಎಸ್. ಅರಕೇರಿ.—ಗ್ರಾಮಾಧಿಕಾರಿಗಳ ಹುದ್ದೆಗಳನ್ನು ರದ್ದು ಮಾಡಿದಾಗ ತೋಟಿತಳವಾರರುಗಳಿಗೆ ಕಾಂಪೆನ್‌ಸೇಷನ್ ಕೊಡಬೇಕೆಂದು ಸರ್ಕಾರ ನಿರ್ಧಾರ ಮಾಡಿತು. ಅದಕ್ಕೆ ಅರ್ಜಿ ಹಾಕಲು ಯಾವುದು ಕೊನೆಯ ತಾರೀಖು ಎಂದು ಹಳ್ಳಿಹಳ್ಳಿಗಳಲ್ಲಿ ತಿಳಿಸಲಾಯಿತೇ, ಹಾಗೆ ತಿಳಿಸಿದ್ದರೆ ಯಾವ ರೀತಿಯಾಗಿ ತಿಳಿಸಲಾಯಿತು?

ಶ್ರೀ ಎಚ್. ವಿ. ಕೌಜಲಗಿ.—ನನಗೆ ಗೊತ್ತಿರುವಂತೆ ಇನ್ನೂ ತಿಳಿಸಿಲ್ಲ. ಕಾಯಿದೆ ಪ್ರಶ್ನೆ ವಿಚಾರ ಮಾಡಿ ತಿಳಿಸಬೇಕಾಗುತ್ತದೆ.

ಶ್ರೀ ಎನ್. ಜಿ. ಹಾಲಪ್ಪ.—ಗ್ರಾಮಾಧಿಕಾರಿಗಳಿಗೆ ಎಷ್ಟು ಪೋಟಿಗೆ ಕೊಡುತ್ತಿದ್ದಿರಿ, ಸಂಬಳ ರೂಪವಾಗಿ ಎಷ್ಟು ಕೊಡುತ್ತಿದ್ದಿರಿ? ಗ್ರಾಮಾಧಿಕಾರಿಗಳ ಹುದ್ದೆಯನ್ನು ರದ್ದು ಮಾಡಿದ ಮೇಲೆ ಹೊಸದಾಗಿ ನೇಮಕಗಳನ್ನು ಮಾಡುವುದಕ್ಕೆ ಎಷ್ಟು ಖರ್ಚು ಬರುತ್ತದೆ?

ಶ್ರೀ ಎಚ್. ವಿ. ಕೌಜಲಗಿ.—ಆ ಪ್ರಶ್ನೆ ಇದರೊಳಗೆ ಉದ್ಭವಿಸುವುದಿಲ್ಲ.

ಶ್ರೀ ಹಂಜಿ ಶಿವಣ್ಣ.—ವಿಲೇಜ್ ಅಕೌಂಟೆಂಟರನ್ನು ನೇಮಕ ಮಾಡಿದ ಸಂದರ್ಭದಲ್ಲಿ ಕೆಲವರು ಹೈಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದು ಮಾಡಬಾದ ಕೆಲಸವನು ಮಾಡುತ್ತಿದ್ದಾರೆ. ಒಂದು ಜಮೀನನ್ನು ಮೂರು ನಾಲ್ಕು ಜನರ ಹೆಸರಿಗೆ ಬರೆಯುವುದು, ಪೋರ್ಜರಿ ಸಾಗುವಳಿ ಚೀಟಿಗಳನ್ನು ಮಾಡಿ ಜಮೀನು ಮಾರಾಟ ಮಾಡುವುದು ಈ ರೀತಿಯಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅಂಥವರ ಮೇಲೆ ಕ್ರಮ ಕಗೆದುಕೊಳ್ಳುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಟ್ರಾನ್ಸ್‌ಫರ್ ಪ್ರಶ್ನೆ ಇದರೊಳಗೆ ಬರುವುದಿಲ್ಲ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಮ್ಮ ಭಾಗದಲ್ಲಿ ಸೇತಸಂದಿ ಜಮೀನುಗಳನ್ನು ಮೂರು ಪಟ್ಟು ತುಂಬಿ ವಶಪಡಿಸಿಕೊಂಡಿದ್ದಾರೆ, ಆ ನಂತರ 1963 ರಿಂದ 1968ರವರೆಗೂ ಕೆಲಸದಲ್ಲಿ ಇಟ್ಟುಕೊಂಡಿದ್ದಾರೆ. ಅವರಿಗೆ ಆ ಕಾಲದ ಪಗಾರವನ್ನು ಇನ್ನೂ ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಅವರಿಗೆ ಎಷ್ಟು ಪಗಾರ ಕೊಡಬೇಕು ಎಂದು ಸರ್ಕಾರ ಗೊತ್ತು ಮಾಡಿದೆಯೋ ಅಷ್ಟು ಪಗಾರ ಕೊಡಲಿಕ್ಕೆ ತೀರ್ಮಾನ ಕ್ರಮ ತೆಗೆದುಕೊಳ್ಳುತ್ತೇವೆ. ಕೆಲವರು ಇನ್ನೂ ಹೆಚ್ಚು ಕೊಡಬೇಕೆಂದು ಕೇಳುತ್ತಿದ್ದಾರೆ. ಆ ರೀತಿ ಕೊಡಲಿಕ್ಕೆ ಆಗಲಾರದು.

ಶ್ರೀ ಬಾಪೂಗೌಡ.—ವಿಲೇಜ್ ಅಕೌಂಟೆಂಟರನ್ನು ಪ್ರತಿವರ್ಷವೂ ನೇಮಕ ಮಾಡುತ್ತಾರೆ. ಹಾಗೆ ನೇಮಕ ಮಾಡಿದ ಕಾಲಕ್ಕೆ ವತನದಾರರನ್ನು ತೆಗೆದುಕೊಳ್ಳುವ ವಿಚಾರ ಇದೆಯೇ ಅಥವಾ ಮೆಟ್ರಿಕ್ಯುಲೇಟ್ ಅದ ಜನರನ್ನು ತೆಗೆದುಕೊಂಡು ಟ್ರೈನ್ಡ್ ಮಾಡುವ ವಿಚಾರ ಇದೆಯೇ ?

ಶ್ರೀ ಹೆಚ್. ವಿ. ಕೌಜಲಗಿ.—ವತನದಾರರು ಮತ್ತು ಹೆರಿಡಟರಿ ಆಫೀಸರ್ ಮನೆತನದಿಂದಲೂ ನಹ ತೆಗೆದುಕೊಳ್ಳುವ ವಿಚಾರ ಇದೆ. ಅವರಿಗೆ ಕೆಲವು ನವಲತ್ತುಗಳನ್ನು ಕೊಟ್ಟಿದ್ದೇವೆ. ಅವರಿಗೆ ವಯಸ್ಸಿನ ಪರಮಿತಿ 50 ವರ್ಷವಾಗಿದ್ದರೂ ಮೆಟ್ರಿಕ್ಯುಲೇಷನ್ ಫೇಲ್ ಆಗಿದ್ದರೂ ನಡೆಯುತ್ತದೆ.

ಶ್ರೀ ಎಂ. ಬಿ. ಬಣಕಾರ್.—ಅವರು ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ನಿಲ್ಲುವುದಕ್ಕೆ ಪರ್ಮಿಷನ್ ಕೇಳಿದ್ದಾರೆ. ಅದಕ್ಕೆ ಅವಕಾಶವನ್ನು ಕೊಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಈ ಪ್ರಶ್ನೆ ಇಲ್ಲಿ ಬರುವುದಿಲ್ಲ.

## Fire Brigade Service Station at Moodibidri

24. Sri RATNAKUMAR KATTEMAR (Mudibidri).—

Will the Chief Minister be pleased to state.—

whether Government propose to set up a "Fire Brigade Service Station" at Moodibidri?

*A*—Sri VEERENDRA PATIL (Chief Minister).—

No.

ಶ್ರೀ ರತನ್‌ಕುಮಾರ್ ಕಟ್ಟೇಮಾರ್.—ಸ್ವಾಮಿ, ಮೂಡುಬಿದ್ರಿಗೆ ಒಂದು ಅಗ್ನಿಶಾಮಕ ದಳವನ್ನು ಕೇಳಿದ್ದೇವೆ. ತಮ್ಮ ಅಧಿಕಾರಾವಧಿಯಲ್ಲಿ ಅದರೂ ಇಂತಹ ಯಾವುದಾದರೂ ಕೆಲಸವನ್ನು ಮಾಡಿಕೊಡಬಹುದೇ ?

† ಶ್ರೀ ವೀರೇಂದ್ರ ಪಾಟೀಲ್.—ಅಗ್ನಿಶಾಮಕದಳವನ್ನು ಕೊಡಬೇಕಾಗಿದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದಕ್ಕೆ ರೆಕರಿಂಗ್ ಮತ್ತು ನಾನ್ ರೆಕರಿಂಗ್ ಬಾಬುಗಳಲ್ಲಿ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ತಿಳಿಯಬೇಕು. ಅಲ್ಲಿ ಮುನಿಸಿಪಾಲಿಟಿ ಇದೆಯೋ ಪಂಚಾಯಿತಿ ಇದೆಯೋ ಗೊತ್ತಿಲ್ಲ. ಫೈರ್ ಸರ್ವಿಸ್ ಸ್ಟೇಷನ್ಸ್ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಸಣ್ಣ ಸಣ್ಣ ಊರುಗಳಲ್ಲಿ, ಪಂಚಾಯಿತಿಗಳು ಇಡುವುದಕ್ಕಾಗುವುದಿಲ್ಲ ಏಕೆಂದರೆ ಬಹಳ ಹಣ ಖರ್ಚಾಗುತ್ತದೆ. ಎಲ್ಲೆ ಫೈರ್ ಸ್ಟೇಷನ್ ಬೇಕಾಗಿದೆಯೋ ಅಲ್ಲಿನ ಮುನಿಸಿಪಾಲಿಟಿಯವರು 50 ಪರ್ಸೆಂಟು ಕೊಡುವುದಕ್ಕೆ ಒಪ್ಪಿ ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ನೋಡುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ಎಷ್ಟು ಕೇಂದ್ರಗಳಲ್ಲಿ ಅಗ್ನಿಶಾಮಕದಳದ ಕೇಂದ್ರಗಳನ್ನು ತೆರೆದಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತ್ಯೇಕ ಪ್ರಶ್ನೆ ಹಾಕಿದರೆ ಇದೀ ಸ್ಟೇಟ್‌ನಲ್ಲಿ ಎಷ್ಟು ತೆರೆದಿದ್ದೇವೆ ಎನ್ನುವ ಉತ್ತರ ಕೊಡುತ್ತೇನೆ.

Sri KONDAJJI BASAPPA.—What is the estimated cost of fire brigade ?

Sri VEERENDRA PATIL.—About non-recurring and recurring expenditure for the fire station, there are two types of fire stations ; one